ಒಟ್ಟಿನಲ್ಲಿ ಮನುಷ್ಯನಾದವನು ಯಾವುದೋ ಒಂದು ಕಲೆಯಲ್ಲಿ ತೊಡಗಿಸಿಕೊಳ್ಳಬೇಕು ಅಷ್ಟೆ. ಅದೂ ಆತ್ಮಾನಂದಕ್ಕಾಗಿ.'

ಮಾತಿನ ನಡುವೆ ನಾನು ಹೇಳಿದೆ 'ನಾನು ಬಂದ ವಿಷಯವನ್ನೇ ಮರೆತಿದ್ದೆ. ನಾನು ಇನ್ನೆರಡು ದಿನಕ್ಕೆ ಬೊಂಬಾಯಿಗೆ ಹೋಗಬೇಕು, ಹೋಗುವಾಗ ನಿಮ್ಮನ್ನು ಕರೆದೊಯ್ಯೋಣ ಎಂದು ಬಂದೆ.'

'ಬೊಂಬಾಯಿಗೇ? ಮಾವನನ್ನು ಕೇಳಿದ್ದೀರಾ?'

'ಹೌದು, ಇದಕ್ಕೆ ಅವರ ಪರಿಪೂರ್ಣ ಸಮ್ಮತವಿದೆ. ನೀವು 'ಕೂಪಮಂಡೂಕ'ದಂತೆ ಇಲ್ಲಿರುವುದು ಸರಿಯಲ್ಲ ಎಂದೇ ಅವರ ಅಭಿಪ್ರಾಯ. ನಿಮ್ಮ ಕಲೆಗೆ ಸೂಕ್ತ ಪರಿಸರ ಪ್ರಕಾಶ ಕೊಡಬೇಕು. ಇದೇ ನನ್ನದು ಹಾಗೂ ನಿಮ್ಮ ಮಾವನವರ ಅಭಿಮತ. ಬೊಂಬಾಯಿಯಲ್ಲಿ ಅನೇಕ ಕಲಾಪೋಷಕರ ಪರಿಚಯವಾಗುತ್ತದೆ. ಅನೇಕ ಸಂಸ್ಥಾನಗಳ ಅರಸರ ಪರಿಚಯವಾಗುತ್ತದೆ. ನಿಮ್ಮ ಕಲೆ ಬೆಳಕಿಗೆ ಬರುತ್ತದೆ. ಜೊತೆಗೆ ಪಾಶ್ಚಾತ್ಯ ಕಲಾವಿದರ ಪರಿಚಯವೂ ಆಗುತ್ತಿದೆ.' ರವಿವರ್ಮರು ತಕ್ಷಣ ಒಪ್ಪಲಿಲ್ಲ, ಅವರಿಗೆ ಪುರತಾರ್ಥಿ, ಮಕ್ಕಳನ್ನೂ, ಕಿಳಿಮಾನೂರಿನವರನ್ನು ಬಿಟ್ಟುಬರುವುದು ಅಷ್ಟು ಸುಲಭವಲ್ಲ ಎಂಬುದು ನನಗೂ ತಿಳಿದಿತ್ತು. ಆದರೆ ಬೇರೆ ದಾರಿಯಿರಲಿಲ್ಲ, 'ನಿಮ್ಮೊಂದಿಗೆ ನಿಮ್ಮ ತಮ್ಮ ರಾಜವರ್ಮರನ್ನು ಕರೆತನ್ನಿ. ದೊಡ್ಡ ದೊಡ್ಡ ಯೋಜನೆಗಳನ್ನು ಒಪ್ಪಿಕೊಂಡಾಗ ಅವರ ಸಹಾಯವನ್ನು ಪಡೆದುಕೊಳ್ಳಬಹುದು' ಎಂದು ಸಲಹೆಯಿತ್ತೆ.



ರಾಜಾ ರವಿವರ್ಮ ಚಿತ್ರಿಸಿದ ದಮಯಂತಿ

ಸ್ವಲ್ಪ ಯೋಚಿಸಿ ರವಿವರ್ಮರು ಬರಲು ಒಪ್ಪಿಕೊಂಡರು. ಬೊಂಬಾಯಿಯಲ್ಲಿ ರವಿವರ್ಮರನ್ನು ನನ್ನ ವಶದಲ್ಲಿದ್ದ ಭಾಟಿಯ ಬಂಗ್ಲೆಯಲ್ಲಿ ಇಳಿಸಿದೆ. ವಿಶಾಲವಾದ ಎರಡಂತಸ್ತಿನ ಮನೆ. ಮುಂದೆ ಸುಂದರ ಉದ್ಯಾನವನ. ಗಾಳಿ ಬೆಳಕುಗಳು ಯಥೇಚ್ಛವಾಗಿದ್ದ ಕೊಠಡಿಗಳು ರವಿವರ್ಮರಿಗಂತೂ ಆ ಬಂಗ್ಲೆ ತುಂಬ ಹಿಡಿಸಿತು. ಅದೇ ವಾರದಲ್ಲಿ ಅವರನ್ನು ಬಿಕನೇರ್ ಸಂಸ್ಥಾನದ ಮಹಾರಾಜರಿಗೆ ಪರಿಚಯಿಸಿದೆ. ಮಾತ್ರವಲ್ಲ ರವಿವರ್ಮರನ್ನು ಅನೇಕ ಕಲಾ ಪೋಷಕರಿಗೆ ಪರಿಚಯಿಸಿದೆ. ಹೀಗಾಗಿ ಅವರಿಗೆ ಅನೇಕ ಕಾರ್ಯಭಾರಗಳು ಬರತೊಡಗಿದವು. ನಾನು ರವಿವರ್ಮರನ್ನು ಕರೆತಂದ ಉದ್ದೇಶ ಸಾರ್ಥಕವಾಯಿತೆಂದು ನಿರ್ಧರಿಸಿ ಒಮ್ಮೆ ಹೇಳಿದೆ 'ನಾಳೆಯ ದಿನ ನಾನು ಬಿಕನೇರ್ ಮಹಾರಾಜರೊಂದಿಗೆ ಬಿಕನೇರ್‌ಗೆ ಹೋಗಿಬರುತ್ತೇನೆ. ಆಗಾಗ ಬಂದು ತಮ್ಮನ್ನು ಕಾಣುತ್ತೇನೆ. ನೀವು ನಿಮ್ಮ ತಮ್ಮನೊಂದಿಗೆ ಈ ಚಿತ್ರಗಳನ್ನೆಲ್ಲಾ ಪೂರ್ತಿಗೊಳಿಸಿ'. ಅವರನ್ನು ಬಿಟ್ಟು ಹೋಗಬೇಕಲ್ಲಾ ಎಂದು ನನಗೂ ಕಣ್ಣು ತುಂಬಿತು. ಉಕ್ಕಿಬಂದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ರವಿವರ್ಮ ಹೇಳಿದರು 'ಇದು ದುಃಖದ ಕಣ್ಣೀರಲ್ಲ ದಿವಾನರೇ, ಇದು ಕೃತಜ್ಞತೆಯ ಕಣ್ಣೀರು. ನನ್ನ ತಂದೆಯಂತೆ, ನನ್ನ ಮಾವನಂತೆ ನನಗೆ ಊರುಗೋಲಾಗಿ ನಿಂತ ನಿಮ್ಮಂಥವರನ್ನು ಕೊಟ್ಟದಕ್ಕೆ ಆ ದೇವರಿಗೆ ಅರ್ಪಿಸುವ ಬಾಷ್ಪಾಂಜಲಿ.

## ಸುಗಂಧ

ಸ್ವಯಂಭುಲಿಂಗವೆಂದೇ ಪ್ರಸಿದ್ಧಿ ಪಡೆದ ವಾಲ್ಕೇಶ್ವರ ದೇವಾಲಯಕ್ಕೆ ನಾನು ಎಂದಿನಂತೆ ನನ್ನ ಸಾರೋಟಿನಲ್ಲಿ, ತಂಗಿ ಕಮಲ ಹಾಗೂ ದಾಸಿ ಕೇಸರ್ ಜೊತೆಯಲ್ಲಿ ಹೋಗಿದ್ದೆ. ಸಾರೋಟನ್ನು ದೇವಸ್ಥಾನದ ಮೆಟ್ಟಿಲುಗಳಿರುವ ಕಡೆ ನಿಲ್ಲಿಸಿದ ಗಾಡಿಯವ ಮಹಮದ್. ನಾವು ಇಳಿದು ಈಶ್ವರನ ದರ್ಶನಕ್ಕಾಗಿ ಮೆಟ್ಟಿಲು ಹತ್ತುತ್ತಿದ್ದೆವು. ಆ ದಿನ ನನ್ನ ಪ್ರೀತಿಯ ಅಚ್ಚಹಸಿರು ಬಣ್ಣದ ಒಂಭತ್ತು ಗಜ ಜರಿಅಂಚಿನ ಸೀರೆಯನ್ನು ಕಚ್ಚೆ ಹಾಕಿ, ನಾವು ಮಹಾರಾಷ್ಟ್ರದ ಹೆಂಗಸರು ಉಡುವಂತೆ ಉಟ್ಟಿದ್ದೆ. ಮಿಂದು ಬಂದದ್ದರಿಂದ ಕೂದಲನ್ನು ತುರುಬು ಕಟ್ಟದೆ ಇಳಿಬಿಟ್ಟಿದ್ದೆ.

ಯಾರೋ ನನ್ನನ್ನು ತೀವ್ರವಾಗಿ ಗಮನಿಸುತ್ತಿರುವಂತೆ ಭಾಸವಾಗಿ ಕತ್ತೆತ್ತಿ ನೋಡಿದೆ. ನನ್ನ ಊಹೆ ನಿಜವಾಗಿತ್ತು. ಜರಿ ಪಂಚೆಯುಟ್ಟ ಶ್ಯಾಮಲ ವರ್ಣದ ಯುವಕನೊಬ್ಬ ಜನಿವಾರ ಉತ್ತರೀಯಗಳೊಂದಿಗೆ ಬರಿ ಮೈಯಲ್ಲಿ ನಿಂತಿದ್ದ. ಹಣೆಯಲ್ಲಿ ಗಂಧವಿತ್ತು. ಅವನು ನನ್ನನ್ನೇ ತದೇಕಚಿತ್ತನಾಗಿ ನೋಡುತ್ತಿರುವ ಅರಿವಾದಾಗ ನಾನು ಸಣ್ಣಗೆ ಬೆವೆತೆ. ಆ ಕಣ್ಗಳ ಆಕರ್ಷಣೀಯ ಶಕ್ತಿಗೆ, ನಾನು ಬೆಚ್ಚಿದೆ. 'ಕೃಷ್ಣ ಕಪ್ಪಾದರೂ ಸುಂದರ' ಎಂದು ಕೇಳಿದ್ದೆ. ಈಗ ಪ್ರತ್ಯಕ್ಷ ನೋಡಿದಂತೆ ಭಾಸವಾಯಿತು. ಕ್ಷಣವೆರಡು ದಿಟ್ಟಿಸಿ ಮತ್ತೆ ತಲೆತಗ್ಗಿಸಿ ನಡೆದೆ. ದೇವರ ದರ್ಶನ ಮುಗಿಸಿ ಹಿಂತಿರುಗಿ ಬಂದಾಗ ಅವನು ಅದೇ ಸ್ಥಳದಲ್ಲಿ ನಮ್ಮನ್ನು ನಿರೀಕ್ಷಿಸುತ್ತಾ ನಿಂತಿರುವುದನ್ನು ಕಂಡು ನಾನು ಬೆಚ್ಚಿಬಿದ್ದೆ. 'ಇವನೇಕೆ ಹೀಗೆ ನನ್ನನ್ನೇ ನುಂಗಿಬಿಡುವಂತೆ ನೋಡುತ್ತಿದ್ದಾನೆ' ಎಂದು ಕಸಿವಿಸಿಯಾದರೂ ಆ ನೋಟ ನನಗೇಕೋ ಆಪ್ಯಾಯಮಾನವಾಗಿತ್ತು. ಆ ನೋಟದಲ್ಲಿದ್ದ ಆರಾಧನಾ ಭಾವ, ದೇವಿಯ ವಿಗ್ರಹವನ್ನು ನೋಡುವ ಭಕ್ತರ ದೃಷ್ಟಿಯಂತೆ ಕಂಡಿತು ನನಗೆ. ಆದರೂ ಅದನ್ನು ನಿರ್ಲಕ್ಷಿಸಿ ನಾನು ಮುನ್ನಡೆದೆ.

ಹೀಗೆ ಮೂರು ನಾಲ್ಕು ದಿನ ನಾನು ಗುಡಿಗೆ ಹೋದಾಗ ಆ ತರುಣ ನನಗಾಗಿ ಕಾಯುತ್ತಿರುವುದು ಅರಿವಾಯ್ತು. ಒಂದು ದಿನ ನಾನು ಸರಸರನೆ ಮೆಟ್ಟಿಲಿಳಿದು ಸಾರೋಟಿನ ಬಳಿಹೋದೆ. ಆದರೆ ಹಿಂದೆ ಬರುತ್ತಿದ್ದ ದಾಸಿ ಕೇಸರ್ ಅವನ ಬಳಿ ಏನೋ ಮಾತನಾಡುತ್ತಿದ್ದಳು. ಅವಳೇನು ಹೇಳಿದಳೆಂದು ಕೇಳಿದೆ. 'ಆ ಮನುಷ್ಯನಿಗೆ ಸರಿಯಾಗಿ ಬುದ್ಧಿ ಕಲಿಸಿ ಬಂದಿದ್ದೇನೆ. ನಿನ್ನಂತಹ ಹತ್ತು ಜನರನ್ನು ಊಳಿಗಕ್ಕೆ ಇಟ್ಟುಕೊಳ್ಳುವಷ್ಟು ಶ್ರೀಮಂತಿಕೆಯಿದೆ ನನ್ನ ಒಡತಿ ಸುಗಂಧಬಾಯಿಗೆ. ನೀನು ಮಾಡುತ್ತಿರುವುದು ಸರಿಯಲ್ಲ, ನೀನು ಹಾಗೆಲ್ಲ ನಿಂತು ಅವಳನ್ನು ನೋಡುವುದು ನನ್ನ ಒಡತಿಗೆ ಇಷ್ಟವಿಲ್ಲ. ಇನ್ನೊಮ್ಮೆ ನೀನು ಹೀಗೆ ಮಾಡುವುದು ನನ್ನ ಗಮನಕ್ಕೆ ಬಂದರೆ ಪೋಲಿಸರಿಗೆ ಹೇಳುವೆ' ಎಂದು ಬೆದರಿಸಿದೆ ಎಂದಳು ಕೇಸರ್.

'ಅದೇಕೆ ಹಾಗೆಲ್ಲಾ ಹೇಳಿದೆ. ಅವನು ನನ್ನ ಬಳಿ ಏನಾದರೂ ಚಂದಾ ಕೇಳುವುದಕ್ಕಾಗಿ ನಿಂತಿರಬಹುದು. ನೋಡಲು ಒಳ್ಳೆ ಶೋತ್ರೀಯ ಮನೆತನದ ಭಕ್ತನಂತೆ ಕಾಣುತ್ತಾನೆ. ದಕ್ಷಿಣ ಭಾರತದವನಿರಬೇಕು' ಎಂದೆ.

**(ಸಶೇಷ)**